# ಬಲಿಷ್ಠ ಬೀಗ

## ವಾಟ್ಸ್ಆ್ಯಪ್ ಹೊಸ ಫೀಚರ್



ವೈಯಕ್ತಿಕ ಸುರಕ್ಷತೆಗೆ ಇನ್ನಷ್ಟು ಆದ್ಯತೆ ನೀಡಿರುವ ವಾಟ್ಸ್ಆ್ಯಪ್, ಪ್ರತಿ ಚಾಟ್ ಅನ್ನೂ ಲಾಕ್ ಮಾಡುವ ಅವಕಾಶ ಕಲ್ಪಿಸಲು ಮುಂದಾಗಿದೆ.

**ಶಶಿಕುಮಾರ್ ಸಿ.**

ಜನಪ್ರಿಯ ಮೆಸೇಜಿಂಗ್ ಆ್ಯಪ್ 'ವಾಟ್ಸ್ಆ್ಯಪ್' ತನ್ನ ಬಳಕೆದಾರರ ವೈಯಕ್ತಿಕ ಮಾಹಿತಿಯ ಸುರಕ್ಷತೆಯನ್ನು ಕಾಯುವ 'ಲಾಕ್ ಚಾಟ್' ಎಂಬ ಹೊಸ ಫೀಚರ್ ಪರಿಚಯಿಸಿದ್ದು, ಇದು ವಾಟ್ಸ್ಆ್ಯಪ್‌ನ ಪ್ರತಿ ಕಾಂಟ್ಯಾಕ್ಟ್ ಅನ್ನು ಲಾಕ್ ಮಾಡಲು ಅನುವು ಮಾಡಿಕೊಡಲಿದೆ. ಸದ್ಯ ಈ ಫೀಚರ್ ವಾಟ್ಸ್ಆ್ಯಪ್‌ನ ಬೀಟಾ ಬಳಕೆದಾರರಿಗೆ ಲಭ್ಯವಿದ್ದು, ಪ್ರಾಯೋಗಿಕ ಪರೀಕ್ಷೆಯಲ್ಲಿದೆ.

ಬಳಕೆದಾರರು ತಮ್ಮ ಫಿಂಗರ್‌ಪ್ರಿಂಟ್ ಅಥವಾ ಪಾಸ್‌ವರ್ಡ್ ಬಳಸಿ ವಾಟ್ಸ್ಆ್ಯಪ್‌ನಲ್ಲಿ ಬರುವ ಚಾಟ್‌ಗಳನ್ನು ಲಾಕ್ ಮಾಡಬಹುದಾಗಿದ್ದು, ಗೌಪ್ಯತೆ ದೃಷ್ಟಿಯಿಂದ ಬಳಕೆದಾರರಿಗೆ ಅನುಕೂಲಕರವಾಗಿದೆ. ಬೀಟಾ ಬಳಕೆದಾರರು ಈ ಫೀಚರ್ ಬಳಸುತ್ತಿದ್ದು, ಅವರಿಂದ ಉತ್ತಮವಾದ ಪ್ರತಿಕ್ರಿಯೆ ವ್ಯಕ್ತವಾಗಿದೆ. ಲಾಕ್ ಚಾಟ್‌ನ ಸಹಾಯದಿಂದ ಅಪ್ಲಿಕೇಷನ್ ಲಾಕ್ ಮಾಡದೆಯೇ ನಿರ್ದಿಷ್ಟ ವ್ಯಕ್ತಿಯ ಚಾಟ್ ಲಾಕ್ ಮಾಡಬಹುದಾಗಿದೆ.

ಈಚೆಗೆ ವಾಬೇಟಾಇನ್ಫೋ (WABetaInfo) ವೆಬ್‌ಸೈಟ್‌ನಲ್ಲಿ ಈ ಬಗ್ಗೆ ಮಾಹಿತಿ ಪ್ರಕಟಿಸಲಾಗಿತ್ತು.

### ನಾಲ್ಕು ಫೋನ್, ಒಂದು ಖಾತೆ

ಈ ಮುನ್ನ ಒಂದು ಮೊಬೈಲ್‌ನಲ್ಲಿ ಒಂದು ವಾಟ್ಸ್ಆ್ಯಪ್ ಖಾತೆಯನ್ನು ಬಳಸಬಹುದಿತ್ತು. ಆದರೀಗ ವಾಟ್ಸ್ಆ್ಯಪ್, ನಾಲ್ಕು ಫೋನ್‌ಗಳಲ್ಲಿ ಒಂದೇ ವಾಟ್ಸ್ಆ್ಯಪ್ ಖಾತೆಯನ್ನು ಬಳಸುವ ಅವಕಾಶ ಕಲ್ಪಿಸಿದೆ. ಈ ಫೀಚರ್ ಈಚೆಗಷ್ಟೇ ಲೈವ್ ಆಗಿದೆ.

ಒಂದಕ್ಕಿಂತ ಹೆಚ್ಚಿನ (ಗರಿಷ್ಠ ನಾಲ್ಕು) ಸ್ಮಾರ್ಟ್‌ಫೋನ್‌ಗಳನ್ನು ಬಳಸುತ್ತಿರುವವರೂ ಒಂದೇ ವಾಟ್ಸ್ಆ್ಯಪ್ ಖಾತೆಯನ್ನು ಸುಲಭವಾಗಿ ಎಲ್ಲ ಫೋನ್‌ಗಳಲ್ಲೂ ಬಳಸಬಹುದಾಗಿದೆ. ಇದರಿಂದಾಗಿ ಅವರ ಕೆಲಸ ಕಾರ್ಯವು ಇನ್ನಷ್ಟು ಸಲೀಸಾಗಲಿದೆ. ಇದಕ್ಕಾಗಿ ಬಳಕೆದಾರರು ತಮ್ಮೆಲ್ಲ ಸ್ಮಾರ್ಟ್‌ಫೋನ್‌ಗಳಲ್ಲಿ ವಾಟ್ಸ್ಆ್ಯಪ್‌ನ ಹೊಸ ವರ್ಷನ್‌ಗೆ ಅಪ್‌ಡೇಟ್ ಆಗಬೇಕು.

ಒಂದು ಫೋನ್‌ನಲ್ಲಿ ವಾಟ್ಸ್ಆ್ಯಪ್ ಲಾಗಿನ್ ಆದ ಬಳಿಕ ಉಳಿದ ಮೂರು ಫೋನ್‌ಗಳಲ್ಲಿ ಲಾಗಿನ್ ಆಗುವ ಅವಶ್ಯಕತೆ ಇರುವುದಿಲ್ಲ. ಪ್ರೈಮರಿ ಫೋನ್‌ನ ವಾಟ್ಸಾಪ್ ಖಾತೆ ತೆರೆದು ಅಪ್ಲಿಕೇಷನ್‌ನ ಮೇಲ್ಭಾಗದಲ್ಲಿ ಕಾಣುವ ಮೂರು ಡಾಟ್‌ಗಳ ಮೆನು ಆಯ್ಕೆ ಕ್ಲಿಕ್ಕಿಸಿ. ನಂತರ ತೆರೆದುಕೊಳ್ಳುವ ಲಿಂಕ್ ಡಿವೈಸ್ ಆಯ್ಕೆಯನ್ನು ಕ್ಲಿಕ್ಕಿಸಿದರೆ ಕ್ಯೂಆರ್ ಕೋಡ್ ತೆರೆಯುತ್ತದೆ. ಇದನ್ನು ಸ್ಕ್ಯಾನ್ ಮಾಡುವುದರ ಮೂಲಕ ಬೇರೆ ಡಿವೈಸ್‌ಗಳಲ್ಲಿ ವಾಟ್ಸ್ಆ್ಯಪ್ ಲಾಗಿನ್ ಆಗಬಹುದು.




### ಲಾಕ್ ಮಾಡುವುದು ಹೇಗೆ?

ಲಾಕ್ ಚಾಟ್ ಕೆಲ ದಿನಗಳಲ್ಲಿ ವಾಟ್ಸ್ಆ್ಯಪ್‌ನ ಎಲ್ಲ ಬಳಕೆದಾರರಿಗೆ ಲಭ್ಯವಾಗಲಿದೆ. ಫೀಚರ್ ಬಿಡುಗಡೆಗೊಂಡ ಬಳಿಕ ವಾಟ್ಸ್ಆ್ಯಪ್ ಅಪ್‌ಡೇಟ್ ಮಾಡಿಕೊಳ್ಳಬೇಕು. ನಂತರ ವಾಟ್ಸ್ಆ್ಯಪ್‌ನ ಕಾಂಟ್ಯಾಕ್ಟ್ ಪ್ರೊಫೈಲ್ ವಿಭಾಗಕ್ಕೆ ಹೋಗಿ, ಕೆಳಗೆ ಸ್ಕ್ರಾಲ್ ಮಾಡಬೇಕು. ನಂತರ 'ಲಾಕ್ ಚಾಟ್' ಆಯ್ಕೆಯು ಕಾಣಿಸಿಕೊಳ್ಳುತ್ತದೆ.

ಅದರ ಮೇಲೆ ಕ್ಲಿಕ್ಕಿಸಿದರೆ ಲಾಕ್ ದಿಸ್ ಚಾಟ್ ವಿತ್ ಫಿಂಗರ್‌ಪ್ರಿಂಟ್ ಎನ್ನುವ ಮತ್ತೊಂದು ಆಯ್ಕೆಯು ತೆರೆದುಕೊಳ್ಳುತ್ತದೆ. ಅದನ್ನು ಕ್ಲಿಕ್ಕಿಸಿ ಯಾವ ವಾಟ್ಸ್ಆ್ಯಪ್ ನಂಬರ್‌ನ ಚಾಟ್ ಲಾಕ್ ಮಾಡಬೇಕು ಎಂಬುದನ್ನು ನಮೂದಿಸಿ ಲಾಕ್ ಮಾಡಬಹುದಾಗಿದೆ. ಫಿಂಗರ್ ಪ್ರಿಂಟ್ ಹಾಗೂ ಪಾಸ್‌ವರ್ಡ್ ಎರಡೂ ಮಾದರಿಯಲ್ಲಿ ಲಾಕ್ ಮಾಡುವ ಅವಕಾಶವನ್ನು ಕಲ್ಪಿಸಿದೆ. ಲಾಕ್ ಮಾಡಿದ ಮೇಲೆ ಆ ನಿರ್ದಿಷ್ಟ ಕಾಂಟ್ಯಾಕ್ಟ್‌ಗೆ ಬರುವ ಆಡಿಯೊ, ವಿಡಿಯೊ ಹಾಗೂ ಫೋಟೊಗಳು ಸ್ಮಾರ್ಟ್‌ಫೋನ್ ಗ್ಯಾಲರಿಯಲ್ಲಿ ಸೇವ್ ಆಗುವುದಿಲ್ಲ. ಅಗತ್ಯವಿದ್ದರೆ ಮಾತ್ರ ಬಳಕೆದಾರರು ಸೇವ್ ಮಾಡಿಟ್ಟುಕೊಳ್ಳಬಹುದು. ಇಲ್ಲವಾದಲ್ಲಿ ಕಾಂಟ್ಯಾಕ್ಟ್‌ನ ಚಾಟ್‌ಬಾಕ್ಸ್‌ನಲ್ಲಿ ಮಾತ್ರ ಅವು ಲಭ್ಯವಾಗಲಿವೆ.

ಬೀಟಾ ವರ್ಷನ್‌ನ ವಾಟ್ಸ್ಆ್ಯಪ್ ಬಳಸಲು ಬಯಸುವವರು ಗೂಗಲ್ ಪ್ಲೇಸ್ಟೋರ್‌ನಲ್ಲಿ ಲಭ್ಯವಿರುವ ವಾಟ್ಸ್ಆ್ಯಪ್ ಬೀಟಾ ವರ್ಷನ್ ಡೌನ್‌ಲೋಡ್ ಮಾಡಿಕೊಂಡು ಲಾಗಿನ್ ಆಗಬೇಕು. ನಂತರ ಬೀಟಾ ವರ್ಷನ್ ಬಳಸಲು ಸಾಧ್ಯ. ಬೀಟಾ ವರ್ಷನ್‌ನಲ್ಲಿ ಭಾಗವಹಿಸುವಿಕೆಗೂ ವಾಟ್ಸ್ಆ್ಯಪ್ ಮಿತಿ ಹೇರಿದ್ದು, ಸೀಮಿತ ಸಂಖ್ಯೆಯ ಬಳಕೆದಾರರಿಗೆ ಮಾತ್ರ ಆ ಅವಕಾಶ ಕಲ್ಪಿಸುತ್ತಿದೆ.

ಸದ್ಯ ಇಡೀ ವಾಟ್ಸ್ಆ್ಯಪ್ ಅನ್ನೇ ಲಾಕ್ ಮಾಡುವ ಅವಕಾಶವಿದ್ದು, ಇದರ ಹೊರತಾಗಿ ಪ್ರತಿ ಚಾಟ್ ಅನ್ನೂ ಲಾಕ್ ಮಾಡುವ ಅವಕಾಶ ಹೊಸ ಫೀಚರ್‌ನಿಂದ ಬಳಕೆದಾರರಿಗೆ ಲಭ್ಯವಾಗಿದೆ.